ಓಃಎಸ್ಃನಂ.178/2021

ಪಿ.ಡಬ್ಲ್ಯೂ- 1

**ದಿನಾಂಕಃ 24-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ ಸಿ ಬಿ ವಿ **ವಕೀಲರಿಂದ**

ದಾವ ಸ್ವತ್ತಿನ ಪಶ್ಚಿಮ ಭಾಗಕ್ಕೆ ಸರ್ವೆ ನಂ.172/1 ರಲ್ಲಿ 2ನೇ ಪ್ರತಿವಾದಿ ಹೆಸರಿಗೆ 7 ಗುಂಟೆ ಜಮೀನು ಇದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ದಾವ ಸ್ವತ್ತಿನ ಪಶ್ಚಿಮ ಭಾಗಕ್ಕೆ 2ನೇ ಪ್ರತಿವಾದಿಯ ಬೇರೆ ಜಮೀನು ಇರುತ್ತದೆ. 2ನೇ ಪ್ರತಿವಾದಿಯು ಅವರ ಸರ್ವೆ ನಂ.172/1 ಜಮೀನನ್ನು ಅಳತೆ ಮಾಡಿಸಿದ್ದು, ಅದರ ನೋಟೀಸನ್ನು ನಾನು ಪಡೆದಿರುತ್ತೇನೆಂದರೆ ಸರಿ. ಸಾಕ್ಷಿಯು ಅವರಿಗೆ ನೀಡಿದ ನೋಟೀಸಿನ ಜೆರಾಕ್ಸ್ ಪ್ರತಿಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಅಳತೆ ಮಾಡುವ ಸಮಯದಲ್ಲಿ ನಾವು ಸ್ಥಳದಲ್ಲಿ ಇರಲಿಲ್ಲ ನಮ್ಮನ್ನು ಕರೆದಿರುವುದಿಲ್ಲ. 2ನೇ ಪ್ರತಿವಾದಿಯ ಜಮೀನು ಹದ್ದುಬಸ್ತು ಮಾಡುವ ಸಮಯದಲ್ಲಿ ನಾನು ಹಾಜರಿದ್ದೆ ಎಂದರೆ ಸರಿಯಲ್ಲ. ಹಾಜರಾಗಲು ನನಗೆ ಯಾವುದೇ ತೊಂದರೆ ಇರಲಿಲ್ಲ, ಆದರೆ ಯಾವ ಕಾಲಕ್ಕೆ ಅಳತೆ ಮಾಡುತ್ತೇವೆಂದು ನನಗೆ ತಿಳಿಸಿರಲಿಲ್ಲ.

2ನೇ ಪ್ರತಿವಾದಿಯ 172/1 ಜಮೀನಿನ 4 ಗುಂಟೆಯನ್ನು ನೀವು ಒತ್ತುವರಿ ಮಾಡಿರುತ್ತಿರಾ ಎಂದರೆ ಸರಿಯಲ್ಲ. ಸರ್ವೆ ಇಲಾಖೆಯವರು 2ನೇ ಪ್ರತಿವಾದಿಯ 172/1ರ ಜಮೀನನ್ನು ಅಳತೆ ಮಾಡಿ ಹದ್ದುಬಸ್ತು ಮಾಡುವ ಸಮಯದಲ್ಲಿ ನೀವು 4 ಗುಂಟೆ ಒತ್ತುವರಿ ಮಾಡಿರುವುದಾಗಿ ನಕ್ಷೆ ತಯಾರಿಸಿರುತ್ತಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಸರ್ವೆ ಇಲಾಖೆಯವರು ಮಹಜರ್ ನಲ್ಲಿ ನೀವು ಅಳತೆ ಮಾಡುವ ಸಮಯದಲ್ಲಿ ಹಾಜರಿದ್ದು, ಸಹಿ ಹಾಕುವ ಸಮಯದಲ್ಲಿ ನಿರಾಕರಿಸಿರುತ್ತಿರಾ ಎಂದರೆ ಸರಿಯಲ್ಲ. ನನ್ನ ದಾವ ಸ್ವತ್ತಿನ ಮೇಲೆ ಪ್ರತಿವಾದಿಗಳಿಗೆ ಹಕ್ಕಿಲ್ಲ ಎಂದರೆ ಸರಿ. ಪ್ರತಿವಾದಿಗಳ ದಾವ ಸ್ವತ್ತಿನ ಮೇಲೆ ನಿಮಗೆ ಹಕ್ಕಿಲ್ಲ ಎಂದರೆ ಸಾಕ್ಷಿಯು ನಾವು ಅವರ ಜಮೀನಿಗೆ ಹೋಗಿರುವುದಿಲ್ಲ, ಅವರೇ ನಮ್ಮ ಜಮೀನಿಗೆ ಬಂದಿರುತ್ತಾರೆಂದು ನುಡಿದಿರುತ್ತಾರೆ. 2ನೇ ಪ್ರತಿವಾದಿಯ 4 ಗುಂಟೆಯನ್ನು ನೀವು

ಓಃಎಸ್ಃನಂ.178/2021

**ಪಿ.ಡಬ್ಲ್ಯೂ- 1**

ಒತ್ತುವರಿ ಮಾಡಿದ್ದು, ಅದನ್ನು ಬಿಟ್ಟುಕೊಡಬೇಕಾಗುತ್ತದೆ ಎಂದು ಈ ಸುಳ್ಳು ದಾವೆಯನ್ನು ಅವರ ಮೇಲೆ ಹೂಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. 2 ನೇ ಪ್ರತಿವಾದಿಯು ಅಸಲು ದಾವ ಸಂಖ್ಯೆ 60/2020 ದಾವೆಯನ್ನು ಅವರ 4 ಗುಂಟೆಯನ್ನು ನಿಮ್ಮಿಂದ ಪಡೆಯಲು ನಿಮ್ಮ ತಾಯಿಯ ಮೇಲೆ ದಾವೆ ಹೂಡಿರುತ್ತಾರೆಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ಪ್ರತಿವಾದಿಗಳು ನಿಮ್ಮ ಜಮೀನಿಗೆ ಪ್ರವೇಶ ಮಾಡಿ ತೊಂದರೆ ಕೊಡುತ್ತಿರುವ ಬಗ್ಗೆ ಯಾವುದಾದರೂ ದೂರನ್ನು ನೀಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ದೂರನ್ನು ನೀಡಲುನಿಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಅವರ ನಮಗಿಂತ ಮುಂಚೆ ಹೋಗಿ ದೂರನ್ನು ನೀಡಿರುತ್ತಾರೆಂದು ನುಡಿದಿರುತ್ತಾರೆ. ಪ್ರತಿವಾದಿಯರು ನಿಮ್ಮ ಜಮೀನನ್ನು ಒತ್ತುವರಿ ಮಾಡಲು ಪ್ರಯತ್ನಿಸಿರುವುದಿಲ್ಲ ಹಾಗೂ ನಿಮಗೆ ತೊಂದರೆ ನೀಡಿರುವುದಿಲ್ಲ, ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

Sd/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**